ಎಂಬುದನ್ನು ಮಾನ್ಯ ಮಂತ್ರಿಗಳು ತಿಳಿಸಬೇಕು. ಹಾಗೂ ಇಂತಹ ಕಟ್ಟಡಗಳ ಸೇಫ್ಟಿ ಬಗ್ಗೆ ಏನು ತೀರ್ಮಾನ ತೆಗೆದುಕೊಂಡಿದ್ದೀರಾ ?

ಶ್ರೀ ಎಂ. ಚಂದ್ರಶೇಖರ್.-- ಮಾನ್ಯ ಅಧ್ಯಕ್ಷರೇ ಇವರ ಗಮನ ಸೆಳೆಯುವ ಸೂಚನೆ ಇರುವುದು ಈ ಗಗನಚುಂಬಿ ಕಟ್ಟಡಗಳ ಕೆಲಸ ನಿಂತಿರುವುದರಿಂದ ಅನೇಕ ಕಾರ್ಮಿಕರಿಗೆ ಕೆಲಸ ಇಲ್ಲದೆ ತೊಂದರೆಯಾಗಿದೆ ಎಂಬ ಬಗ್ಗೆ. ಇದಕ್ಕೆ ನಾನು ಹೇಳುವುದು ಇಷ್ಟೆ. ಸುಮಾರು 144 ಕಟ್ಟಡಗಳ ಪೈಕಿ 90 ಕಟ್ಟಡಗಳ ಬಗ್ಗೆ ಡಿಸೈನ್ ಕೊಟ್ಟು 3- ಮತ್ತು 4ನೇ ಅಂತಸ್ತಿನವರೆಗೆ ಕೆಲಸ ಮಾಡಿ ನಿಲ್ಲಿಸಿ ಎಂದು ಹೇಳಿದ್ದೇವೆ. ಆ ಕೆಲಸ ಮುಗಿದ ನಂತರ ಮತ್ತೆ ಡಿಸೈನ್ ಕೊಟ್ಟು ಕೆಲಸ ಮುಂದುವರಿಸಬೇಕೆಂದು ಹೇಳಿದ್ದೇವೆ ಇದರ ಪ್ರಕಾರ 90 ಕಟ್ಟಡಗಳ ಮಾಲೀಕರು ಡಿಸೈನ್‌ಗಳನ್ನು ಕೊಟ್ಟಿದ್ದಾರೆ. ಸುಮಾರು 20 ಕಟ್ಟಡಗಳ ಬಗ್ಗೆ ಇನ್ನೂ ಟಿಸ್ಟ್ ಆಗಬೇಕಾಗಿದೆ. ಈ ಕಟ್ಟಡಗಳ ಬಗ್ಗೆ ಯಾ ಇಷ್ಟರಲ್ಲಿಯೇ ವರದಿ ಬರುತ್ತದೆ. ಈಗಾಗಲೇ 30 ಕಟ್ಟಡಗಳ ಬಗ್ಗೆ ಅಂತಿಮ ವರದಿ ಬಂದಿರುವುದರಿಂದ ಆ ಕಟ್ಟಡಗಳ ಕೆಲಸಕಾರ್ಯಗಳು ಮುಂದುವರಿಯುತ್ತಿವೆ ಆದಕ್ಕೆ ಯಾವ ತೊಡಕೂ ಇಲ್ಲ. 20 ಕಟ್ಟಡಗಳ ಮಾಲೀಕರು ಕೆಲಸ ಮುಂದುವರಿಸಲು ಇನ್ನೂ ಕ್ಲಿಯರೆನ್ಸ್ ಕೊಟ್ಟಿಲ್ಲ. ಮಾರ್ಚ್ ತಿಂಗಳಲ್ಲಿ ವರದಿ ಬರುತ್ತದೆ. ಅಲ್ಲಿಯ ವರೆಗೆ ಅವರು ಕಾಯಬೇಕಾಗುತ್ತದೆ ಯಾರು ಡಿಸೈನ್ ಡ್ರಾಯಿಂಗ್ ಕೊಡದೇ ತಜ್ಞರ ಪರಿಶೀಲನೆಗೆ ಅವಕಾಶ ನೀಡಿಲ್ಲವೋ ಅಂತಹವರಿಗೆಲ್ಲಾ ಕಾನೂನು ಪ್ರಕಾರ ನೋಟೀಸ್ ಜಾರಿ ಮಾಡಿದ್ದೇವೆ. ಮತ್ತು ಕೆಲಸ ನಿಲ್ಲಿಸಬಾರದೆಂಬುದಕ್ಕೆ ಸಮಜಾಯಿಷಿ ಕೇಳಿದ್ದೇವೆ. ಇದಕ್ಕಾಗಿ ನೇಮಕವಾಗಿರತಕ್ಕಂತಹ ಸಮಿತಿಯಲ್ಲಿ ಡಾ|| ವಿಶ್ವನಾಥ್ ಶ್ರೀ ಮನೋಹರ್ ಮತ್ತು ಶ್ರೀ ರಾವ್ ಎಂಬ ಪರಿಣತರು ಇದ್ದಾರೆ. ಇವರೆಲ್ಲಾ ದೊಡ್ಡ ದೊಡ್ಡ ಇಲಾಖೆಗಳಲ್ಲಿ ಕೆಲಸ ಮಾಡಿ ಅನುಭವ ಪಡೆದಿದ್ದಾರೆ.

ಶ್ರೀ ಎಂ. ಎಸ್. ಕೃಷ್ಣನ್.-- ಗಗನಚುಂಬಿ ಕಟ್ಟಡಗಳು ಜಾಸ್ತಿ ಆಗಬೇಕೋ ಅಥವಾ ಬೇಡವೋ ಎಂಬುದನ್ನು ತಾವು ಹೇಳಿ

ಶ್ರೀ ಎಂ. ಚಂದ್ರಶೇಖರ್.-- ಈ ಗಮನ ಸೆಳೆಯುವ ಸೂಚನೆಯಲ್ಲಿ ಆ ವಿಚಾರ ಬಂದಿಲ್ಲ.

ಶ್ರೀ ಎಂ ಎಸ್. ಕೃಷ್ಣನ್.-- ಈ ಗಗನಚುಂಬಿ ಕಟ್ಟಡಗಳಿಗೆ ಲೈಸನ್ಸ್ ಕೊಡಬೇಕೇ ಅಥವಾ ಬೇಡವೆ ಎಂಬುದೇ ಇಲ್ಲಿರುವ ಮುಖ್ಯ ಪ್ರಶ್ನೆಯಲ್ಲವೇ ?

ಅಧ್ಯಕ್ಷರು.— ಅದು ಫಾಲಿಸಿ ಮ್ಯಾಟರ್ ಅದ್ದರಿಂದ ಅವರ ಇಲಾಖೆ ಬೇಡಿಕೆಗಳು ಚರ್ಚೆಗೆ ಬಂದಾಗ ಈ ಬಗ್ಗೆ ಉತ್ತರ ಕೊಡಬಹುದೆಂದು ಕಾಣತ್ತದೆ.

ಶ್ರೀ ಪಿ. ರಾಮದೇವ್.-- ತಜ್ಞರು ಈ ಗಗನಚುಂಬಿ ಕಟ್ಟಡಗಳನ್ನು ಇನ್‌ಸ್ಪೆಕ್ಷನ್ ಮಾಡುವಾಗ ಡೀವಿಯೇಷನ್ ಬಗ್ಗೆ ಮಾತ್ರ ನೋಡುತ್ತಾರೆಯೇ ಹೊರತು ಆ ಕಟ್ಟಡಗಳ ಕ್ವಾಲಿಟಿ ಬಗ್ಗೆ ನೋಡುತ್ತಿಲ್ಲ. ಆದ್ದರಿಂದ ಮಾನ್ಯಮಂತ್ರಿಗಳು ಇದರ ಕಡೆಗೂ ಗಮನ ಕೊಡಬೇಕು.

ಶ್ರೀ ಎಂ. ಚಂದ್ರಶೇಖರ್.-- ಈಗ ಹೊಸ ಬೈಲಾ ಬಂದಿದೆ. ಅದು ಗೆಜಿಟ್‌ನಲ್ಲಿ ಪ್ರಕಟವಾಗಿದೆ. ಈ ಹೊಸಬೈಲಾ ಪ್ರಕಾರ ಪ್ರತಿ ಹಂತದಲ್ಲೂ ಸ್ಟ್ರಕ್ಚರಲ್ ಇಂಜಿನಿಯರ್ ಮತ್ತು ಆರ್ಕಿಟೆಕ್ಟ್ಸ್ ಹೋಗಿ ಪರಿಶೀಲನೆ ಮಾಡಬೇಕಾಗುತ್ತದೆ. ಏನಾದರೂ ಹೆಚ್ಚು ಕಡಿಮೆ ಆದರೆ ಇವರುಗಳೇ ಜವಾಬ್ದಾರರಾಗಬೇಕಾಗುತ್ತದೆ. ಇಂತಹ ಕಟ್ಟಡಗಳನ್ನು ಕಟ್ಟುವ ಮಾಲೀಕರು ಕಾರ್ಪೊರೇಷನ್‌ನಲ್ಲಿ ರಿಜಿಸ್ಟ್ರೇಷನ್ ಮಾಡಿಸಬೇಕಾಗುತ್ತದೆ. ಹೀಗೆ ಅನೇಕ ನಿಬಂಧನೆಗಳನ್ನು ಹೊಸ ಬೈಲಾದಲ್ಲಿ ಅಳವಡಿಸಲಾಗಿದೆ. ಇದನ್ನು ಓದಿದರೆ ತಮಗೆ ಎಲ್ಲವೂ ಅರ್ಥವಾಗುತ್ತದೆ.

(ii) ದಾವಣಗೆರೆ ತಾಲ್ಲೂಕು ಕೈದಾಳೆ ಮತ್ತು ಎಲೇಬೇಲೂರು ಗ್ರಾಮಗಳ ಬಳಿಯಲ್ಲಿ ನಿರ್ಮಿಸಲು ಉದ್ದೇಶಿಸಿರುವ ಪಿಕ್ ಅಪ್ ಟೆಂಡರುಗಳನ್ನು ತಿರಸ್ಕರಿಸುವ ವಿಷಯದ ಬಗ್ಗೆ.

ಶ್ರೀ ಕೆ. ಜಿ. ಮಹೇಶ್ವರಪ್ಪ (ಮಾಯಕೊಂಡ).-- ಮಾನ್ಯ ಅಧ್ಯಕ್ಷರೇ, ದಾವಣಗೆರೆ ತಾಲ್ಲೂಕ್ ಕೈದಾಳೆ ಮತ್ತು ಎಲೇಬೇತೂರು ಗ್ರಾಮಗಳ ಬಳಿಯಲ್ಲಿ ನಿರ್ಮಿಸಲು ಉದ್ದೇಶಿಸಿರುವ ಪಿಕ್‌ಪ್‌ಗಳ ಟೆಂಡರ್‌ಗಳನ್ನು ತಿರಸ್ಕರಿಸುವ ವಿಷಯದ ಬಗ್ಗೆ ನಾನು ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).-- ಮಾನ್ಯ ಅಧ್ಯಕ್ಷರೇ, 7.14 ಲಕ್ಷ ರೂಪಾಯಿ ಮೆಚ್ಚಿದ ಕೈದಾಳೆ ಪಿಕ್‌ಅಪ್ ಮತ್ತು 7.75 ಲಕ್ಷ ರೂಪಾಯಿ ಮೆಚ್ಚಿದ

ಎಲೆಬೇತೂರು ಪಿಕ್‌ಆಪ್‌ಗಳ ಅಂದಾಜುಗಳಿಗೆ ದಿನಾಂಕ 24-4-82 ರಂದು ಸರ್ಕಾರದ ಅಡಳಿತ ನುಂಜೂರಾತಿಯನ್ನು ನೀಡಲಾಯಿತು ಈ ಅಂದಾಜುಗಳಿಗೆ ಮುಖ್ಯ ಎಂಜಿನೀಯರು, ನೀರಾವರಿ ದಕ್ಷಿಣ, ಮೈಸೂರು ಅವರಿಂದ ತಾಂತ್ರಿಕ ನುಂಜೂರಾತಿ ಆಗಸ್ಟ್ 1982ರಲ್ಲಿ ದೊರೆಯಿತು.

ಕೈದಾಳೆ ಪಿಕ್‌ಆಪ್.

ಈ ಕೆಲಸವನ್ನು ಆರಂಭಿಸಲು ದಿನಾಂಕ 10-2-83ರಂದು ಮೊದಲಬಾರಿ ಟೆಂಡರ್ ಕರೆಯಲಾಯಿತು. ಕನಿಷ್ಟ ಟೆಂಡರ್ ದರವೇ 1982-83ರ ದರಪಟ್ಟಿಯ ಅಂದಾಜು ವೆಚ್ಚಕ್ಕಿಂತ ಶೇ 38.17 ಹೆಚ್ಚಿದ್ದುದರಿಂದ, ಸೂಪರಿಂಟೆಂಡಿಂಗ್ ಎಂಜಿನಿಯರ್ ಅವರು ಟೆಂಡರುಗಳನ್ನು ತಿರಸ್ಕರಿಸಿದರು. ಎರಡನೇಯ ಬಾರಿ ಟೆಂಡರ್ ಕರೆದಾಗ, ಯಾವ ಕಂಟ್ರಾಕ್ಟದಾರರೂ ಮುಂದೆ ಬರಲಿಲ್ಲ. ದಿನಾಂಕ 19-7-83 ರಂದು ಮೂರನೆಯ ಬಾರಿ ಟೆಂಡರ್ ಕರೆದಾಗ, ಇಬ್ಬರು ಪ್ರಥಮ ದರ್ಜೆ ಕಂಟ್ರಾಕ್ಟರರು ಟೆಂಡರುಗಳನ್ನು ಹಾಕಿದ್ದಾದರೂ, 1983-84ರ ದರಪಟ್ಟಿಯಂತೆ ಲೆಕ್ಕ ಹಾಕಲಾದ ಅಂದಾಜು ಮೌಲ್ಯಕ್ಕಿಂತ ಶೇ 44.18 ಮತ್ತು ಶೇ 47.04ರಷ್ಟು ಹೆಚ್ಚು ದರಗಳನ್ನು ಸೂಚಿಸಿದ್ದಾರೆ ಈ ಪೈಕಿ ಕನಿಷ್ಠ ದರ ಸೂಚಿಸಿರುವ ಕಂಟ್ರಾಕ್ಟರು 25 ಐಟಂಗಳಿಗೆ ಇಲಾಖೆಯ ದರಗಳಿಗಿಂತ ಶೇ 25ರಷ್ಟು ಹೆಚ್ಚು ಆಥವಾ ಕಡಿಮೆ ದರ ಸೂಚಿಸಿದ್ದಾರೆ. ಟೆಂಡರು ಕರಾರಿನ 9 (A) ಅನುಬಂಧದ ರೀತ್ಯ, ಈ ಕಂಟ್ರಾಕ್ಟರಿಂದ ಮೊದಲು ಐದು ಬಿಲ್ಲುಗಳಲ್ಲಿ ಒಟ್ಟು 3,23,525 ರೂಪಾಯಿಗಳನ್ನು ಮುರಿದುಕೊಳ್ಳಬೇಕಾಗುತ್ತದೆ. ಹಾಗೆ ಮುರಿದು ಕೊಂಡಾಗ, ಕಂಟ್ರಾಕ್ಟರಿಗೆ ಕೆಲಸವನ್ನು ಕರಾರಿಗೆ ತಕ್ಕಂತೆ ಮಾಡಿದರೆ, ತಿಂಗಳಿಗೆ ಉಳಿಯುವ ಹಣ ಕೇವಲ 6,835 ರೂಗಳು ಮಾತ್ರ ಕೆಲಸವನ್ನು ಆರಂಭಿಸುವಾಗಲೇ ಕಂಟ್ರಾಕ್ಟರಿಗೆ ಈ ಹೊರೆ ಹೊರಲು ಸಾಧ್ಯವಾಗದೇ, ಕೆಲಸಕ್ಕೆ ತೊಂದರೆಯಾಗುವುದರಿಂದ ಕಂಟ್ರಾಕ್ಟರು ಸೂಚಿಸಿದ ದರಗಳು ನೈಜ ದರಗಳಲ್ಲವೆಂದೂ ಅನ್ಯವಹಾರಿಕವೆಂದೂ ತೀರ್ಮಾನಿಸಲಾಯಿತು.

ಎಲೇಬೇತೂರು ಪಿಕ್‌ಆಪ್.

ಈ ಕೆಲಸದಲ್ಲೂ ವೇಲಿನ ಪಿಕ್‌ಆಪ್‌ನಂತೆಯೇ ಟೆಂಡರುಗಳ ಸಲ್ಲಿಸುವಿ ಕೆನಡೆದಿದೆ. ಮೊಹಲಬಾರಿಗೆ ದಿನಾಂಕ 10-2-83ರಂದು ಟೆಂಡರ್ ಕರೆದಾಗ, ಕನಿಷ್ಠ ಟೆಂಡರ್ ದರವೇ 1982-83ರ ದರಪಟ್ಟಿಯ ಅಂದಾಜು ವೆಚ್ಚಕ್ಕಿಂತ ಶೇ 31.27ರಷ್ಟು ಹೆಚ್ಚಿದ್ದರಿಂದ, ಟೆಂಡರುಗಳು ತಿರಸ್ಕೃತವಾದವು. ಎರಡನೇಯ ಕರೆಗೆ ಯಾವ ಪ್ರತಿಕ್ರಿಯೆಯೂ ಬರಲಿಲ್ಲ. ತಾ|19-7-1983ರಂದು ಮೂರನೆಯ ಬಾರಿ ಟೆಂಡರ್ ಕರೆದಾಗ, ಮೂರುಜನ ಮೊದಲ ದರ್ಜೆ ಕಂಟ್ರಾಕ್ಟರರು ಟೆಂಡರು ಹಾಕಿದರಾದರೂ, 1981-84ರ ದರಗಳ ಪಟ್ಟಿಯಂತೆ ಲೆಕ್ಕ ಹಾಕಲಾದ ಅಂದಾಜು ಮೌಲ್ಯಕ್ಕಿಂತ ಶೇ 62.75, ಶೇ 53.84 ಮತ್ತು ಶೇ 34.15 ರಷ್ಟು ಹೆಚ್ಚು ದರಗಳನ್ನು ಸೂಚಿಸಿದ್ದಾರೆ ಕನಿಷ್ಠ ದರ ಸೂಚಿಸಿರುವ ಕಂಟ್ರಾಕ್ಟರು 25 ಐಟಂಗಳಿಗೆ ಇಲಾಖೆಯ ದರಗಳಿಗಿಂತ ಶೇ 25 ರಷ್ಟು ಹೆಚ್ಚು ಆಥವಾ ಕಡಿಮೆ ದರಗಳನ್ನು ಸೂಚಿಸಿದ್ದಾರೆ. ಈ ಕೆಲಸದ ವಿಷಯದಲ್ಲಿಯೂ ಮೇಲೆ ಸೂಚಿಸಿದ ಸಂದರ್ಭವೇ ಇದ್ದು, ಕಂಟ್ರಾಕ್ಟರು ಸೂಚಿಸಿದ ದರಗಳು ನೈಜ ದರಗಳಲ್ಲವೆಂದೂ, ಅನ್ಯವಹಾರಿಕವೆಂದೂ ತೀರ್ಮಾನಿಸಲಾಯಿತು.

ಈ ಎರಡೂ ಪಿಕ್‌ಆಪ್‌ಗಳ ಕಾಲುವೆಯ ನಿರ್ಮಾಣಕ್ಕೆ ಬೇಕಾದ ಜಮೀನನ್ನು ವಶಪಡಿಸಿಕೊಳ್ಳಲು, ಜಮೀನುಗಳ ಒಡೆಯರಿಂದ ತೀವ್ರ ಅಡ್ಡಿ ಆತಂಕಗಳನ್ನು ಎದುರಿಸಬೇಕಾಗಬಹುದೆಂದು ತಿಳಿದುಬಂದಿದೆ. ಇದರಿಂದಾಗಿ ಕೆಲಸ ಅರೆ ಬರೆಯಾಗಿ ನಿಲ್ಲುವಂತಾಗುವುದಲ್ಲದೇ, ಕಂಟ್ರಾಕ್ಟರುಗಳು ಹೆಚ್ಚಿನ ದರಗಳನ್ನು ಕೋರಲೂ ಅವಕಾಶವಾಗಬಹುದು ಆದುದರಿಂದ ಅಗತ್ಯ ಜಮೀನುಗಳನ್ನು ಸ್ಥಳೀಯ ನಾಯಕರ ಸಹಾಯದಿಂದ ಪಡೆದು, ಪುನಃ ಟೆಂಡರ್‌ಗಳನ್ನು ಕರೆಯುವಂತೆ ಸೂಚಿಸಲಾಗಿದೆ. ಮಾನ್ಯ ಸದಸ್ಯರು ತಮ್ಮ ವರ್ಚಸ್ಸನ್ನು ಉಪಯೋಗಿಸಿ, ಜಮೀನು ವಶಪಡಿಸಿಕೊಳ್ಳಲು ದಯವಿಟ್ಟು ಸಹಾಯ ಮಾಡುವ ಮೂಲಕ, ಕೆಲಸಗಳಿಗೆ ಇರುವ ಅಡ್ಡಿ ಆತಂಕಗಳನ್ನು ನಿವಾರಿಸಬೇಕೆಂದು ಕೋರುತ್ತೇನೆ.

ಶ್ರೀ ಕೆ. ಜಿ. ಮಹೇಶ್ವರಪ್ಪ.–ಮಾನ್ಯ ಅಧ್ಯಕ್ಷರೆ, ಇದು ಕೇವಲ ನನ್ನ ಕ್ಷೇತ್ರಕ್ಕೆ ಸಂಬಂಧಿಸಿದಂತಹ ವಿಷಯವಲ್ಲ. ಸಾರ್ವತ್ರಿಕವಾಗಿ ಈ ಬಗೆ ಈ ಸದನ ಮತ್ತು ಮಾನ್ಯ ಸಚಿವರು ಬಹಳ ಸ್ಪಷ್ಟವಾದ ಒಂದು ನಿಲುವನ್ನು ತೆಗೆದುಕೊಳ್ಳಬೇಕಾಗುತ್ತದೆ. ದಾವಣಗೆರೆ ತಾಲ್ಲೂಕು ಕೈದಾಳೆ ಮತ್ತು ಎಲೇಬೇತೂರು ಎರಡು ಪಿಕ್‌ಆಪ್‌ಗಳು ಬಹಳ ಮುಖ್ಯವಾದ ಕಾಮಗಾರಿಗಳು. ಮೊದಲನೆಯ ಸಾರಿ ಟೆಂಡರ್ ಕರೆದಾಗ ಸ್ಟ್ಯಾಂಡರ್ಡ್ ರೇಟ್‌ಗಿಂತ 32 ಪರ್ಸೆಂಟ್ ರೇಟ್ ಜಾಸ್ತಿಯಾಗಿದೆ ಎನ್ನುವ ಕಾರಣದಿಂದ ಟೆಂಡರ್‌ನ್ನು ರದ್ದುಪಡಿಸಿದ್ದಾರೆ. ಎರಡನೆಯ ಸಾರಿ ಟೆಂಡರ್ ಕರೆದಾಗ ಯಾರು ಟೆಂಡರ್ ಹಾಕಲಿಲ್ಲ. ಮೂರನೆಯ

ಸಾರಿ ಟೆಂಡರ್ ಕರೆದಾಗ 1983-84 ರಲ್ಲಿ 60 ಪರ್ಸೆಂಟ್ ಜಾಸ್ತಿ ಟೆಂಡರ್ ರೇಟ್ ಕೊಟ್ಟರು. ರೇಟನ್ನು ಕಡಿಮೆ ಮಾಡಿಸಿ ಕೆಲಸವನ್ನು ಕಾರ್ಯಗತಮಾಡದೆ ಟೆಂಡರ್‌ಗಳನ್ನು ರದ್ದುಪಡಿಸಲಾಗಿದೆ. ಆಂದರೆ ಟೆಂಡರ್ ಸಿಸ್ಟಮ್‌ನಲ್ಲಿ ಯಾವರೀತಿಯ ಲೋಪವಿದೆ ? ಈ ರೀತಿಯಾದರೆ ಕಾಮಗಾರಿಗಳು ಕಾರ್ಯಗತವಾಗುತ್ತವೆಯೆ ? ನಮ್ಮ ಕ್ಷೇತ್ರದ ಜನಗಳಿಗೆ ನಾವು ಏನು ಹೇಳಬೇಕು ? ಎರಡು ಮೂರು ವರ್ಷಗಳ ಹಿಂದೆ ಮಂಜೂರಾತಿಯಾಗಿರುವ ಕಾಮಗಾರಿಗಳು, ಟೆಂಡರ್ ರೇಟ್ ಜಾಸ್ತಿಯಾಗಿದೆಯೆಂದು ಟೆಂಡರ್‌ಗಳನ್ನು ರದ್ದುಪಡಿಸಿದರೆ ಪ್ರತಿವರ್ಷ ಸ್ಟ್ಯಾಂಡರ್ಡ್ ರೇಟ್ ಎಸ್ಕಲೇಟ್ ಆಗುತ್ತದೆ. 1982-83 ರಲ್ಲಿ 31 ಪರ್ಸೆಂಟ್ ರೇಟನ್ನು ಒಪ್ಪಿಕೊಂಡಿದ್ದರೆ 1983-84 ರಲ್ಲಿ 60 ಪರ್ಸೆಂಟ್ ರೇಟ್ ಆಗುತ್ತಿರಲಿಲ್ಲ ಹೀಗೆ ಹತ್ತು ಸಾರಿ ಟೆಂಡರ್‌ಗಳನ್ನು ಕರೆದರೂ ರಿಜೆಕ್ಟ್ ಮಾಡುತ್ತಾರೆ. ಇದರ ಬಗ್ಗೆ ಮಾನ್ಯ ಸಚಿವರು ಒಂದು ಹೊಸ ವಿಧಾನವನ್ನು ಹುಡುಕಬೇಕು. ಇಲಾಖೆಯವರು ಕೆಲಸವನ್ನು ತೆಗೆದುಕೊಂಡು ಏಕತ್ಕೆ ಮಾಡಬಾರದು ? ನನ್ನ ಕ್ಷೇತ್ರದಲ್ಲಿರತಕ್ಕ ಎರಡು ಪಿಕಪ್‌ಗಳ ಕೆಲಸ ಈ ರೀತಿಯಾದರೆ, ಎಲ್ಲಾ ಕ್ಷೇತ್ರಗಳಲ್ಲಿರತಕ್ಕ ಸಮಸ್ಯೆಗಳನ್ನು .....

ಅಧ್ಯಕ್ಷರು –ಎಲ್ಲಾ ಕ್ಷೇತ್ರಗಳ ಎಲ್ಲಾ ಸಮಸ್ಯೆಗಳನ್ನು ಕಾಲಿಂಗ್ ಅಟೆನ್‌ಷನ್ ಮೂಲಕ ಚರ್ಚೆ ಮಾಡುವುದಕ್ಕೆ ಆಗುವುದಿಲ್ಲ.

ಶ್ರೀ ಕೆ. ಜಿ. ಮಹೇಶ್ವರಪ್ಪ –ಈ ಎರಡು ಪಿಕಪ್‌ಗಳ ಕೆಲಸ ತತ್ಕ್ಷಣ ಆಗಬೇಕು. ಅಲ್ಲಿ ಕಾಮಗಾರಿ ಕೆಲಸ ನಿಂತುಹೋಗಿದೆ. ಅಲ್ಲಿ ಯಾವುದೇ ಹೊಸ ಪಿಕಪ್‌ಗಳು ಅಥವಾ ಏತ ನೀರಾವರಿ ಕೆಲಸಗಳು ಆಗಿಲ್ಲ

ಶ್ರೀ ಗೋವಂದ ಪಿ. ಒಡೆಯರಾಜ್.–ತಮ್ಮ ಕ್ಷೇತ್ರದಲ್ಲಿಯೂ ಕೆಲಸ ನಿಂತು ಹೋಗಿದೆಯೆ ?

ಶ್ರೀ ಕೆ. ಜಿ. ಮಹೇಶ್ವರಪ್ಪ –ಕಾಮಗಾರಿ ಇಲಾಖೆಯನ್ನು ಹೊತ್ತಿರತಕ್ಕ ಅತ್ಯಂತ ದಕ್ಷರಾದ ಮಂತ್ರಿಗಳಿದ್ದಾರೆ, ಅದಕ್ಕೆ ಒಂದು ಪರಿಹಾರವನ್ನು ಹುಡುಕುತ್ತಾರೆ. ದಕ್ಷರಾದ ಮಂತ್ರಿಗಳಿದ್ದಾರೆ, ಆದಕ್ಕೆ ಒಂದು ಪರಿಹಾರವನ್ನು ಹುಡುಕುತ್ತಾರೆ. ಅದಕ್ಷರಾದ ಮಂತ್ರಿಗಳ ಕೈಯಲ್ಲಿ ಈ ಖಾತೆಯಿರುವುದರಿಂದ ಇವತ್ತು ಕಾಮಗಾರಿ ಕೆಲಸಗಳು ಯಶಸ್ವಿಯಾಗಿ ನಡೆಯುತ್ತವೆ ಎಂದು ನಾನು ತಿಳಿದುಕೊಂಡಿದ್ದೇನೆ. 1983-84 ರಲ್ಲಿ ಸ್ಟ್ಯಾಂಡರ್ಡ್ ರೇಟ್‌ಗಿಂತ ಟೆಂಡರ್‌ರೇಟ್ ಜಾಸ್ತಿಯಿದೆಯೆಂದು ಟೆಂಡರನ್ನು ರದ್ದುಪಡಿಸಲಾಗಿದೆ ಇಲಾಖೆಯ ಮುಖ್ಯ ಇಂಜಿನಿಯರ್‌ಗಳು ಎಷ್ಟು ಮಿಸ್‌ಲೀಡ್ ಮಾಡುತ್ತಾರೆಂದರೆ, ಕಾಲುವೆ ತೋಡಲಿಕ್ಕೆ ಭೂಮಿಯನ್ನು ಸಂಪೂರ್ಣವಾಗಿ ಸ್ವಾಧೀನಪಡಿಸಿಕೊಳ್ಳಬೇಕು, ಕಾಲುವೆ ತೋಡುವಾಗ ತಕರಾರುಗಳು ಬರುತ್ತವೆ ಭೂಮಿಯನ್ನು ಸಂಪೂರ್ಣವಾಗಿ ಸ್ವಾಧೀನಪಡಿಸಿಕೊಂಡ ಮೇಲೆ ಟೆಂಡರ್ ಅಕ್ಸೆಪ್ಟ್ ಮಾಡಿ ಕೊಳ್ಳೋಣವೆಂದು ಬರೆದಿದ್ದಾರೆಂದು ನಾನು ಕೇಳಿದ್ದೇನೆ. ಇದನ್ನು ಮಾನ್ಯ ಮಂತ್ರಿಗಳು ಒಪ್ಪುತ್ತಾರೆಯೆ ? ಜಮೀನು ಸ್ವಾಧೀನಪಡಿಸಿಕೊಳ್ಳುವಾಗ ನನ್ನ ಶಿಫಾರಸ್ಸು ಬೇಕೆಂದು ಕೇಳಿದ್ದಾರೆ. ಕಾಲುವೆಯನ್ನು ತೋಡುವಾಗ ಯಾವುದೇ ರೀತಿಯ ತಕರಾರುಗಳು ಬರಲಾರವು. ಏನಾದರೂ ಒಂದು ಪಕ್ಷ ಎಲ್ಲಿಯಾದರೂ ತಕರಾರು ಬಂದರೆ ಅದನ್ನು ಬಿಟ್ಟು ಮುಂದೆ ಕೆಲಸಮಾಡಿದರೆ ಕೆಲಸ ನಡೆಯುತ್ತಿರುತ್ತದೆ.

ಅಧ್ಯಕ್ಷರು.–ಮಾನ್ಯ ಸದಸ್ಯರು ಭಾಷಣ ಮಾಡಬೇಡಿ.

ಶ್ರೀ ಕೆ. ಜಿ. ಮಹೇಶ್ವರಪ್ಪ –ಕಾಲುವೆ ತೋಡತಕ್ಕಂತಹ ಕೆಲಸ ತತ್ಕ್ಷಣ ಆಗಬೇಕು. ಕಾಲುವೆ ತೋಡುವಾಗ ಜನ ಯಾರೂ ಅಡ್ಡಿ ಬರುವುದಿಲ್ಲ. ಕಾಲುವೆ ತೋಡಲಿಕ್ಕೆ ಪೂರ್ತಿ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳುವವರೆಗೂ ಕಾಯುವುದಾದರೆ ಪಿಕಪ್‌ಗಳನ್ನು ರದ್ದುಪಡಿಸಿ ನಾಳೆ ನಾನು ಸತ್ಯಾಗ್ರಹ ಮಾಡುವ ಪರಿಸ್ಥಿತಿ ಬಂದರೂ ಬರಬಹುದು ನಾನು ನನ್ನ ಕ್ಷೇತ್ರಕ್ಕೆ ಹೋದರೆ ಜನಗಳು 'ಪಿಕಪ್' ಏನಾಯಿತು ಎಂದು ಕೇಳುತ್ತಾರೆ ? ಜನರು ಪಿಕಪ್ ಯಾವಾಗ ಆಗುತ್ತದೆಂದು ಕೇಳುತ್ತಾರೆ. ನಾನು ನಿಧಾನವಾಗಿ ಆಗುತ್ತದೆಂದು ಹೇಳುತ್ತಿದ್ದೇನೆ ಹೊಸ ವಿಧಾನದಿಂದ ಪಿಕಪ್ ಕೆಲಸವನ್ನು ಕಾರ್ಯಗತ ಮಾಡಬೇಕೆಂದು ಮಾನ್ಯ ಸಚಿವರಲ್ಲಿ ಒತ್ತಾಯ ಪಡಿಸುತ್ತೇನೆ.

ಶ್ರೀ ಎಚ್. ಡಿ. ದೇವೇಗೌಡ.–ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ಸದಸ್ಯರು ವ್ಯಕ್ತಪಡಿಸಿದಂತಹ ಕಳಕಳಿಯನ್ನು ನಾನು ಅರ್ಥಮಾಡಿಕೊಂಡಿದ್ದೇನೆ. ಮೂರನೆಯ ಬಾರಿ ಟೆಂಡರ್ ಕರೆದಾಗ, ನೈಜ ದರವನ್ನು 60 ಪರ್ಸೆಂಟ್ ಹೆಚ್ಚು ಕೊಟ್ಟಿದ್ದಾರೆ. ನೈಜ ದರ ಜಾಸ್ತಿ ಮಾಡಿದ್ದರಿಂದ ಅಡ್ಡಿಯಾಗಿದೆಯೆಂದು ಇಲಾಖೆಯ ಅಧಿಕಾರಿಗಳು ಮಾಹಿತಿಯನ್ನು ಕೊಟ್ಟಿದ್ದಾರೆ. ಮಾನ್ಯ ಸದಸ್ಯರು ಕಾಲುವೆ ತೋಡುವಾಗ ಯಾವುದೇ ರೀತಿಯ ಅಡ್ಡಿಯಾಗಲಾರದು ಎಂದು, ಅದರ ಬಗ್ಗೆ ಆತಂಕ ಇಟ್ಟುಕೊಳ್ಳಬಾರದೆಂದು ಈ ಸದನದಲ್ಲಿ ತಿಳಿಸಿದ್ದಾರೆ. ಒಂದು ವೇಳೆ ಏನಾದರು ಅಡ್ಡಿ ಆತಂಕಗಳು ತೊಂದರೆಗಳು ಬಂದರೆ ಮಾನ್ಯ

ಸದಸ್ಯರು ನೆರವಿಗೆ ಬರಬೇಕು. ಇಲಾಖೆಯ ವತಿಯಿಂದ ಕೆಲಸವನ್ನು ತೆಗೆದುಕೊಳ್ಳುವುದಕ್ಕೆ ತೊಂದರೆಯೇನೂ ಇಲ್ಲ. ತಮಗೆ ಗೊತ್ತಿದೆ ಪೆಡ್ಯಲ್‌ರೇಟ್‌ನಲ್ಲಿ ಕೆಲಸ ಮಾಡದಿದ್ದರೆ ಎ. ಜಿ ಯವರು ಅಬ್ಜೆಕ್ಷನ್ ಹಾಕುತ್ತಾರೆ. ಟೆಂಡರ್ ಕೊಡುವಾಗ ಎಷ್ಟು ಪರ್ಸೆಂಟ್ ಕೊಟ್ಟರೂ ಅಬ್ಜೆಕ್ಟ್ ಮಾಡುವುದಿಲ್ಲ, ಇಲಾಖೆಯವರು ಕೆಲಸ ಮಾಡಿದರೆ ಅಬ್ಜೆಕ್ಟ್ ಮಾಡುತ್ತಾರೆ. ಆದರೂ ಈ ಎರಡೂ ಪಿಕಪ್‌ಗಳ ಕೆಲಸವನ್ನು ಇಲಾಖೆಯ ವತಿಯಿಂದ ಮಾಡಲಿಕ್ಕೆ ಸಾಧ್ಯವಿದೆ. ಈ ತಿಂಗಳಿನಲ್ಲಿಯೇ ಕೆಲಸವನ್ನು ಪ್ರಾರಂಭಮಾಡುತ್ತೇವೆ. ಕೆಲಸ ಪ್ರಾರಂಭಮಾಡುವಾಗ ಮಾನ್ಯ ಸದಸ್ಯರನ್ನು ಆಹ್ವಾನಿಸಲಾಗುತ್ತದೆ. ನಾನು ಇದರ ಬಗ್ಗೆ ಈಗಲೇ ಆದೇಶ ಕೂಡುತ್ತೇನೆ.

Presentation of White Paper

ಶ್ರೀ ರಾಮಕೃಷ್ಣ ಹೆಗಡೆ.–ಮಾನ್ಯ ಅಧ್ಯಕ್ಷರೆ, ಮುರ್ನಾಲ್ಕು ದಿವಸಗಳ ಹಿಂದೆ ಸದನದಲ್ಲಿ ಬೆಲೆ ಏರಿಕೆಯ ಬಗೆ ಒಂದು ಶ್ವೇತ ಪತ್ರವನ್ನು ಮಂಡಿಸುತ್ತೇನೆಂದು ಹೇಳಿದ್ದೇನೆ. ಆ ಬಗ್ಗೆ ಶ್ವೇತಪತ್ರವನ್ನು ಕನ್ನಡದಲ್ಲಿ ಸಭೆಯ ಮುಂದೆ ಮಂಡಿಸುತ್ತಿದ್ದೇನೆ.

xx xx xx xx xx xx

Mr Speaker -- White Paper presented.

PRESENTATION OF PETITIONS

ಶ್ರೀ ಗೋವಿಂದ ಪಿ. ಒಡೆಯರಾಜ್.–ಮಾನ್ಯ ಅಧ್ಯಕ್ಷರೆ, ಗುಲ್ಬರ್ಗಾಜಿಲ್ಲೆಯ ಸೇಡಂ ತಾಲ್ಲೂಕಿನಲ್ಲಿ ಈ ವರ್ಷ ಬಹಳಷ್ಟು ಮಳೆಯಾದ್ದರಿಂದ ಮುಂಗಾರಿ ಮತ್ತು ಹಿಂಗಾರಿ ಬೆಳೆಗೆ ತುಂಬಲಾರದ ನಷ್ಟವುಂಟಾಗಿದೆ. ಆದ್ದರಿಂದ ವಿವಿಧ ಸಹಕಾರಿ ಸಂಘಗಳು ಮತ್ತು ಭೂ ಅಭಿವೃದ್ಧಿ ಬ್ಯಾಂಕ್‌ನಲ್ಲಿ ಸಾಲ ಪಡೆದುಕೊಂಡಂತಹ ರೈತರಿಗೆ ಸಾಲ ಮನ್ನಾ ಮಾಡುವ ಬಗ್ಗೆ ಸೇಡಂ ತಾಲ್ಲೂಕಿನ ಅನೇಕ ಗ್ರಾಮಗಳ ರೈತರು ಸಹಿ ಮಾಡಿರುವ ಅರ್ಜಿಯನ್ನು ತಮಗೆ ಅರ್ಪಿಸುತ್ತಿದ್ದೇನೆ.

Mr. Speaker --Petition presented

ಶ್ರೀ ಎಂ. ಎಸ್. ಪಾಟೀಲ್.–ಮಾನ್ಯ ಅಧ್ಯಕ್ಷರೆ, ಹುಕ್ಕೇರಿ ತಾಲ್ಲೂಕಿನ ಲಕ್ಷ್ಮೇಶ್ವರ ಕೋಡಿ ಕೆರೆ ಆಗಬೇಕೆಂದು ಸರ್ಕಾರಕ್ಕೆ ಆ ಭಾಗದ ಜನರು ಮನನ ಮಾಡಿಕೊಳ್ಳುತ್ತಿದ್ದಾರೆ. ಇದುವರೆಗೆ ಸರ್ಕಾರ ಗಮನ ಹರಿಸಲಿಲ್ಲ ಈಗ ಒಂದು ಸಂತೋಷದ ವಿಚಾರ ತಿಳಿದು ಬಂದಿದೆ. ಈ ಸಾರಿ ಮಾನ್ಯ ನೀರಾವರಿ ಮಂತ್ರಿಗಳು ಇದನ್ನು ತೆಗೆದುಕೊಂಡಿದ್ದಾರೆಂದು ತಿಳಿದು ಬಂದಿದೆ. ಆದರೂ ಈ ಮನವಿಯನ್ನು ಸಲ್ಲಿಸುತ್ತಿದ್ದೇನೆ.

Mr. Speaker -- Petition presented.

ಶ್ರೀ ಜೆ. ಡಿ. ಸೋಮಪ್ಪ.-- ಸ್ವಾಮಿ ನಾನು ಒಂದು ಟೆಲಿಗ್ರಾಮ್ ಕಳುಹಿಸಿದ ವಿಚಾರ ಏನಾಯಿತು ? ಬಸ್ಸುಗಳು ಇಲ್ಲ, ನಾನು ಟ್ಯಾಕ್ಸಿಯಲ್ಲಿ 50೦ ರೂಪಾಯಿ ಕೊಟ್ಟು ಬಂದಿದ್ದೇನೆ. ಬಸ್ಸುಗಳು ಇಲ್ಲದೆ ಇರುವುದರಿಂದ ಸಾರ್ವಜನಿಕರಿಗೆ ಬಹಳ ತೊಂದರೆಯಾಗಿದೆ.

ಅಧ್ಯಕ್ಷರು.-- ನೀವು ಕಳುಹಿಸಿದ ಟೆಲಿಗ್ರಾಂ ನಿಧಾನವಾಗಿ ಬಂದಿದೆ. ನೀವು ನನ್ನ ಛೇಂಬರಿಗೆ ಬಂದು ಮಾತನಾಡಿ.

Annexure

LEGISLATIVE BUSINESS

[Motion to Consider]

The Karnataka Zilla Parishad, Taluk Panchayat Samitis, Mandal Panchayats And Nyaya Panchayats Bills, 1983.

Mr. Speaker -- Now we will take up further discussion moved by the Hon'ble Minister.

(ಮಾನ್ಯ ಉಪಾಧ್ಯಕ್ಷರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಶ್ರೀ ಅಬ್ದುಲ್ ನಜೀರ್‌ಸಾಬ್ (ಗ್ರಾಮೋಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ಯ ಸಚಿವರು).-- ಮಾನ್ಯ ಅಧ್ಯಕ್ಷರೆ, ಇದೊಂದು ಮಹತ್ವಪೂರ್ಣವಾದಂಥ ಮಸೂದೆ...

ಶ್ರೀ ಎಸ್. ಭೀಮಣ್ಣ ಖಂಡ್ರೆ.— ನಾನು ಇದರ ಬಗ್ಗೆ ಕ್ರಿಯಾಲೋಪವನ್ನು ಎತ್ತುತ್ತೇನೆ.

ಉಪಾಧ್ಯಕ್ಷರು.— ಮಾನ್ಯ ಮಂತ್ರಿಗಳು ಎಕ್ಸ್‌ಪ್ಲೇನ್ ಮಾಡಲಿ.